# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ದೂರವಾಣಿ ಸಂ.08354-230276
ಫ್ಯಾಕ್ಸ್ ನಂ.08354-230300
ಮೊ.ಸಂ.9480696389
ಈಮೇಲ್: registrar@uhsbagalkot.edu.in

ಕುಲಸಚಿವರ ಕಛೇರಿ
ಉದ್ಯಾನಗಿರಿ
ಸೀಮಿಕೇರಿ ಬೈಪಾಸ್
ಬಾಗಲಕೋಟೆ-587104

ಸಂಖ್ಯೆ:ಕುಸ/ನೇವಿ/ಹೈ.ಕ/626 /2021-22 ದಿನಾಂಕ: 29.10.2021

## ಪರಿಷ್ಕೃತ ಅಧಿಸೂಚನೆ-II

**ವಿಷಯ:** ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರಡಿಯಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿನ ವಿವಿಧ ವೃಂದಗಳಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಬಳ್ಳಾರಿ ಜಿಲ್ಲೆಯ **'ಹರಪನಹಳ್ಳಿ ತಾಲೂಕಿನ ಸ್ಥಳೀಯ ವ್ಯಕ್ತಿಗಳಿಗೆ'** ಮಾತ್ರ ಅಭಿಮತ ಚಲಾಯಿಸಲು ಅವಕಾಶ ನೀಡುವ ಕುರಿತು

**ಉಲ್ಲೇಖ:** 1. ಈ ಕಛೇರಿ ಪರಿಷ್ಕೃತ ಅಧಿಸೂಚನೆ ಸಂ.ಕುಸ/ನೇವಿ/ಹೈ-ಕ/ಪ.ಅ/2014-15/8015 ದಿನಾಂಕ: 19.01.2015, 15.09.2017 & 16.09.2021.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಸುತ್ತೋಲೆ ಸಂಖ್ಯೆ: ಸಿಆಸುಇ 22 ಹೈಕಕೋ 2013 ದಿನಾಂಕ: 24.04.2019
3. ನೌಕರರ ಮನವಿ ಪತ್ರ ದಿನಾಂಕ: 26.08.2021
4. ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟೆ ಇವರ ಅನುಮೋದನೆ ದಿನಾಂಕ 28.10.2021

><><><><

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 13ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಸೇವೆಯಲ್ಲಿನ ನೇರ ನೇಮಕಾತಿ ಮತ್ತು ಮುಂಬಡ್ತಿಗಳಲ್ಲಿ ಶೇ.8 (State level local cadre) ಅನುಸೂಚಿ- I ಹಾಗೂ ಶೇ.75, 80 ಮತ್ತು 85 (Regional level local cadre) ಅನುಸೂಚಿ- II ರಷ್ಟು ಹುದ್ದೆಗಳನ್ನು ಕಾಯ್ದಿರಿಸಿ ಉಲ್ಲೇಖಿತ (1) ರಂತೆ ಪರಿಷ್ಕೃತ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ.

ಭಾರತೀಯ ಸಂವಿಧಾನದ ಅನುಚ್ಛೇದ 371(ಜೆ)ಯ ತಿದ್ದುಪಡಿಯ ರೀತ್ಯಾ ಕರ್ನಾಟಕ ರಾಜ್ಯದ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೀಡಲಾಗಿರುವ ವಿಶೇಷ ಸ್ಥಾನಮಾನವು ಉಲ್ಲೇಖ (2) ರನ್ವಯ **'ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿಗೂ'** ಅನ್ವಯವಾಗಿರುವ ಹಿನ್ನೆಲೆಯಲ್ಲಿ, ಆ ಪ್ರದೇಶದ ಜನರಿಗೆ (ಸ್ಥಳೀಯ ವ್ಯಕ್ತಿಗಳಿಗೆ) ಸರ್ಕಾರಿ ಸೇವೆಯಲ್ಲಿನ ನೇರ ನೇಮಕಾತಿ ಮತ್ತು ಮುಂಬಡ್ತಿಗಳಲ್ಲಿ ಮೀಸಲಾತಿಗಳನ್ನು ಒದಗಿಸಲು ಉದ್ದೇಶಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಉಲ್ಲೇಖ(3) ರನ್ವಯ ಆ ಪ್ರದೇಶದ ನೌಕರರು ಮನವಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ, ತೋವಿವಿ, ಬಾಗಲಕೋಟೆಯ ಸೇವೆಯಲ್ಲಿನ ನೇರ ನೇಮಕಾತಿ ಮತ್ತು ಮುಂಬಡ್ತಿಗಳಲ್ಲಿ ಶೇ.8 (State level local cadre) ಪರಿಷ್ಕೃತ ಅನುಸೂಚಿ-I ಹಾಗೂ ಶೇ.75, 80 ಮತ್ತು 85 (Regional level local cadre) ಪರಿಷ್ಕೃತ ಅನುಸೂಚಿ- II ರಷ್ಟು ಹುದ್ದೆಗಳನ್ನು ಕಾಯ್ದಿರಿಸಿ ಪರಿಷ್ಕೃತ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 5ರನ್ವಯ ಸ್ಥಳಿಯ ವೃಂದ ಆಯ್ಕೆಗೆ **ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಅರ್ಹ ಸ್ಥಳೀಯ ವ್ಯಕ್ತಿಗಳಿಗೆ ಮಾತ್ರ ಅಭಿಮತ ಚಲಾಯಿಸಲು ಅವಕಾಶ ನೀಡಲು** ಸದರಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದರಂತೆ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿಗೆ ಸೇರಿದ ಅಭ್ಯರ್ಥಿಗಳು ಸ್ಥಳೀಯ ವೃಂದದಲ್ಲಿ ತಮ್ಮ ಆಯ್ಕೆಯನ್ನು ನೀಡಬೇಕಾಗಿರುತ್ತದೆ. ಅಲ್ಲದೆ ಆಯ್ಕೆ ನೀಡಿರುವ ಅಭ್ಯರ್ಥಿಗಳು ಸ್ಥಳೀಯ ವೃಂದದಲ್ಲಿಯೇ 'ಎ' ದರ್ಜೆಯ ಕಿರಿಯ ಶ್ರೇಣಿ ಹುದ್ದೆಯ ಮುಂಬಡ್ತಿ ಪಡೆಯುವವರೆಗೆ ಮುಂದುವರೆಯಬೇಕಾಗಿರುತ್ತದೆ ಹಾಗೂ ಅಂತಹ ನೌಕರರ ಜ್ಯೇಷ್ಠತೆ, ಮುಂಬಡ್ತಿ ಮತ್ತು ಧಾರಣಾಧಿಕಾರವು (ಲೀನ್) ಅದೇ ವೃಂದದಲ್ಲಿ ಮುಂದುವರೆಯತಕ್ಕದ್ದು. ಉಲ್ಲೇಖಿತ ಅಧಿಸೂಚನೆಯ ರೀತ್ಯಾ ನೇರ ನೇಮಕಾತಿ ಮತ್ತು ಮುಂಬಡ್ತಿಗಳಲ್ಲಿ ಪ್ರಯೋಜನ ಪಡೆಯುವ ಅಭ್ಯರ್ಥಿಗಳು ಸದರಿ ಉಲ್ಲೇಖಿತ ಅಧಿಸೂಚನೆಯಲ್ಲಿ ಸೂಚಿಸಿರುವ ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ.

ಸದರಿ ಹುದ್ದೆಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಗ್ರೂಪ್-ಎ ಕಿರಿಯ ವೇತನ ಶ್ರೇಣಿ ವೃಂದದ ಹುದ್ದೆ, ಗ್ರೂಪ್-ಬಿ, ಸಿ ಮತ್ತು ಡಿ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳ ಪೈಕಿ ತಮ್ಮ ಸೇವಾ ಪುಸ್ತಕದಲ್ಲಿ ಬಳ್ಳಾರಿ ಜಿಲ್ಲೆಯ **ಹರಪನಹಳ್ಳಿ ತಾಲೂಕನ್ನು** ಸ್ವಂತ ಊರು (Home Town) ಎಂದು ಘೋಷಣೆ ಮಾಡಲಾಗಿರುವ ಅಧಿಕಾರಿ/ನೌಕರರುಗಳ ಹೈದ್ರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ಲಭ್ಯವಿರುವ ಶೇ.8 (State level local cadre) ಹಾಗೂ ಶೇ.75, 80 ಮತ್ತು 85 (Regional level local cadre)ರಷ್ಟು ಹುದ್ದೆಗಳಲ್ಲಿ ಗುರುತಿಸಲಾಗಿರುವ ಹುದ್ದೆಗಳಿಗೆ ಮುಂಬಡ್ತಿ ಪಡೆಯಲು ಹಾಗೂ ಸದರಿ ಸ್ಥಳೀಯ ವೃಂದದಲ್ಲಿ ಮುಂದುವರೆಯಲು ಇಚ್ಛಿಸುವ ಅಧಿಕಾರಿ / ನೌಕರರುಗಳು ತಮ್ಮ ಇಚ್ಛೆಯನ್ನು **"ಸ್ವಗ್ರಾಮ ಪ್ರಮಾಣ ಪತ್ರ"** (ಅನುಬಂಧ-ಎ&ಸಿ) **ಮೂಲಕ 30 ದಿನಗಳೊಳಗಾಗಿ** ತಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು (ನಮೂನೆ ಪ್ರತಿ ಲಗತ್ತಿಸಿದೆ). ಒಂದು ವೇಳೆ, ಅಧಿಕಾರಿ /

ನೌಕರರುಗಳ ಸೇವಾ ಪುಸ್ತಕದಲ್ಲಿನ ಸ್ವಂತ ಊರು ಹೈ-ಕ ಪ್ರದೇಶ ವ್ಯಾಪ್ತಿಯಲ್ಲಿ ಘೋಷಣೆ ಮಾಡಿರದಿದ್ದಲ್ಲಿ, ಸ್ಥಳೀಯ ವೃಂದದಲ್ಲಿ ಮುಂದುವರೆಯಲು ಇಚ್ಛಿಸಿದಲ್ಲಿ, ಅಂತಹ ನೌಕರರು **"ಅರ್ಹತಾ ಪ್ರಮಾಣ ಪತ್ರ" (ಅನುಬಂಧ-ಬಿ)** ವನ್ನು ಅಸಿಸ್ಟೆಂಟ್ ಕಮೀಷನ್‌ರವರಿಂದ ಪಡೆದು ಕಳುಹಿಸಲು ತಿಳಿಸಲಾಗಿದೆ (ನಮೂನೆ ಪ್ರತಿ ಲಗತ್ತಿಸಿದೆ).

ಈ ಸಂಬಂಧ, ಅಧಿಕಾರಿಗಳು/ನೌಕರರು ನೀಡುವ ಆಯ್ಕೆಯು (Option) ಹಿಂಪಡೆಯಲಾಗದ ಆಯ್ಕೆಯಾಗಿರುತ್ತದೆ. ಈ ಬಗ್ಗೆ ನೌಕರರು ತಮ್ಮ ಸೇವಾವಧಿಯಲ್ಲಿ ಅಭಿಮತ ಆಯ್ಕೆಯನ್ನು (Option) ಒಂದೇ ಬಾರಿ ನೀಡಲು ಅವಕಾಶವಿರುತ್ತದೆ. ಒಂದು ವೇಳೆ ಅರ್ಹ ನೌಕರರು 30 ದಿನಗಳಲ್ಲಿ ತಮ್ಮ ಆಯ್ಕೆಯನ್ನು ಚಲಾಯಿಸದೇ ಇರುವ ಸಂದರ್ಭದಲ್ಲಿ ಅವರು ಸ್ಥಳೀಯ ವೃಂದವನ್ನು ಸೇರಲು ಇಚ್ಛೆ ಹೊಂದಿಲ್ಲವೆಂದು ಭಾವಿಸಲಾಗುವುದು.

ಒಂದು ವೇಳೆ ಈ ಸಂಬಂಧ ಸ್ವೀಕರಿಸಲಾಗುವ ಆಯ್ಕೆಗಳು ನಿಗದಿಪಡಿಸಿರುವ ಹುದ್ದೆಗಳಿಗೆ ಮೀರಿದ್ದಲ್ಲಿ ಆಯ್ಕೆಗಳನ್ನು ಚಾಲ್ತಿಯಲ್ಲಿರುವ ಜೇಷ್ಠತಾ ಪಟ್ಟಿಯ ಪರಸ್ಪರ ಜ್ಯೇಷ್ಠತೆ ಹಾಗೂ ಮೀಸಲಾತಿ ಆಧಾರದ ಮೇಲೆ ನಿಗದಿಪಡಿಸಿರುವ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಪರಿಗಣಿಸಲಾಗುವುದು.

ಸದರಿ ಪರಿಷ್ಕೃತ ಅಧಿಸೂಚನೆಯು ವಿಶ್ವವಿದ್ಯಾಲಯದ ಅಂತರ್ಜಾಲ **https://uhsbagalkot.karnataka.gov.in** ನಲ್ಲಿ ಲಭ್ಯವಿರುತ್ತದೆ.

**ಆದೇಶದ ಮೇರೆಗೆ,**

**ಕುಲಸಚಿವರು**
**ತೋ.ವಿ.ವಿ., ಬಾಗಲಕೋಟೆ**

**ಪ್ರತಿಯನ್ನು ಆದರಪೂರ್ವಕವಾಗಿ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು.ಇ. (ಆಡಳಿತ)/ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು.
3) ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳಿಗೆ – ಈ ಅಧಿಸೂಚನೆಯನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಯ ಸಿಬ್ಬಂದಿಗಳ ಗಮನಕ್ಕೆ ತರಲು ಹಾಗೂ ಸ್ಥಳೀಯ ವೃಂದದಲ್ಲಿ ಮುಂದುವರಿಯಲು ಇಚ್ಛಿಸುವ ಅಧಿಕಾರಿ / ನೌಕರರುಗಳ ಸೇವಾ ಪುಸ್ತಕದಲ್ಲಿನ ಸ್ವಂತ ಊರು ಹೈ-ಕ ಪ್ರದೇಶ ವ್ಯಾಪ್ತಿಯಲ್ಲಿನ **'ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕು'** ಎಂದು ಘೋಷಣೆ ಮಾಡಿರುವುದನ್ನು ಖಚಿತಪಡಿಸಿಕೊಂಡು ಸದರಿಯವರ ಮನವಿಯನ್ನು ಅನುಬಂಧ-ಸಿ ಹಾಗೂ ತಮ್ಮ ಅಭಿಪ್ರಾಯವನ್ನು ಅನುಬಂಧ-ಎ (ನಮೂನೆ ಪ್ರತಿ ಲಗತ್ತಿಸಿದೆ) ರಲ್ಲಿ ಭರ್ತಿ ಮಾಡಿ ಕುಲಸಚಿವರು, ತೋ.ವಿ.ವಿ., ಬಾಗಲಕೋಟೆ ಇವರಿಗೆ ರವಾನಿಸಲು ಕೋರಿದೆ.

**ಪ್ರತಿಯನ್ನು:**

1) ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ತೋ.ವಿ.ವಿ., ಬಾಗಲಕೋಟೆ
2) ಕಛೇರಿ ಕಡತಕ್ಕೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

## <u>ಪರಿಷ್ಕೃತ ಅನುಸೂಚಿ-I (State level Local Cadre)</u>

| ಕ್ರ. ಸಂ | ಹುದ್ದೆ | ವೇತನ ಶ್ರೇಣಿ (ರೂ.ಗಳಲ್ಲಿ) | ಮಂಜೂರಾದ ವೃಂದಬಲ (ತೋವಿವಿ ಬಾಗಲಕೋಟೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ) ಮಾತೃ ವೃಂದ | ಮುಂಬಡ್ತಿ | ನೇರ ನೇಮಕಾತಿ (ನೇ.ನೇ.) | ಸ್ಥಳೀಯ ವೃಂದದಲ್ಲಿ ಹೈ-ಕ ಪ್ರದೇಶದವರಿಗಾಗಿ ಗುರುತಿಸಲಾದ ಶೇ.8ರಷ್ಟು ಹುದ್ದೆಗಳು ಸ್ಥಳೀಯ ವೃಂದ | | |
|---|---|---|---|---|---|---|---|---|
| | | | | | | ಮುಂಬಡ್ತಿ | ನೇರ ನೇಮಕಾತಿ | ಒಟ್ಟು |
| 1 | 2 | 3 | 4 | 5 | 6 | 7 | 8 | 9 |
| | 1. ಗ್ರೂಪ್ 'ಎ' ಹುದ್ದೆಗಳು : (ಸೀನಿಯರ್ ಸ್ಕೇಲ್ ಹುದ್ದೆಗಳು) | | | | | | | |
| 1 | ಅಧಿಕಾರಿಗಳು (ನಿಶ್ಚಿತಾವಧಿ ಹುದ್ದೆಗಳು) | 144200-218200 | | (ಶೇ.100 ನೇ.ನೇ.) | | | | |
| | ಕುಲಪತಿಗಳು | | 1 | – | 1 | | 1* | 1* |
| | ಶಿಕ್ಷಣ ನಿರ್ದೇಶಕರು | | 1 | – | 1 | – | | |
| | ಕುಲಸಚಿವರು | | 1 | – | 1 | – | | |
| | ಸಂಶೋಧನಾ ನಿರ್ದೇಶಕರು | | 1 | – | 1 | – | | |
| | ವಿಸ್ತರಣಾ ನಿರ್ದೇಶಕರು | | 1 | – | 1 | – | | |
| | ಡೀನ್ (ಸ್ನಾತಕೋತ್ತರ) | | 1 | – | 1 | – | | |
| | ಡೀನ್ (ವಿದ್ಯಾರ್ಥಿ ಕಲ್ಯಾಣ) | | 1 | – | 1 | – | | |
| | ಹಣಕಾಸು ನಿಯಂತ್ರಣಾಧಿಕಾರಿಗಳು | | 1 | – | 1 | – | | |
| | ಗ್ರಂಥಪಾಲಕರು | | 1 | – | 1 | – | | |
| | ಡೀನ್, ಕಿ.ರಾ.ಚಿ.ತೋ.ಮ., ಅರಭಾವಿ | | 1 | – | 1 | – | 1* | 1* |
| | ಡೀನ್, ತೋ.ಮ., ಬಾಗಲಕೋಟ | | 1 | – | 1 | – | | |
| | ಡೀನ್, ತೋ.ಮ., ಕೋಲಾರ | | 1 | – | 1 | – | | |
| | ಡೀನ್, ತೋ.ಮ., ಮೈಸೂರು | | 1 | – | 1 | – | | |
| | ಡೀನ್, ತೋ.ಮ., ಶಿರಸಿ | | 1 | – | 1 | – | | |
| | ಡೀನ್, ತೋ.ಮ., ಬೆಂಗಳೂರು | | 1 | – | 1 | – | | |
| 2 | ಉಪ ಆಡಳಿತಾಧಿಕಾರಿಗಳು/ ಉಪ ಕುಲಸಚಿವರು | 67550-104600 | 3 | (ಶೇ.100 ಮುಂಬಡ್ತಿ) 3 | – | ಸದರಿ ಮೀಸಲಾತಿ ಅನ್ವಯವಾಗುವುದಿಲ್ಲ. | | |
| 3 | ಉಪ ಹಣಕಾಸು ನಿಯಂತ್ರಣಾಧಿಕಾರಿಗಳು | 67550-104600 | 3 | (ಶೇ.100 ಮುಂಬಡ್ತಿ) 3 | – | ಸದರಿ ಮೀಸಲಾತಿ ಅನ್ವಯವಾಗುವುದಿಲ್ಲ. | | |
| 4 | ಕಾರ್ಯ ನಿರ್ವಾಹಕ ಅಭಿಯಂತರರು | 67550-104600 | 2 | (ಶೇ.100 ಮುಂಬಡ್ತಿ) 2 | – | ಸದರಿ ಮೀಸಲಾತಿ ಅನ್ವಯವಾಗುವುದಿಲ್ಲ. | | |
| 1 | ಪ್ರಾಧ್ಯಾಪಕರು (ಇಂಟರ್‌ಸೇ ಮೆರಿಟ್) | 144200-218200 | 35 | (ಶೇ.100 ನೇ.ನೇ.) – | 35 | – | 3 | 3 |
| 2 | ಸಹ ಪ್ರಾಧ್ಯಾಪಕರು (ಇಂಟರ್‌ಸೇ ಮೆರಿಟ್) | 131400-217100 | 80 | (ಶೇ.100 ನೇ.ನೇ.) – | 80 | – | 7 | 7 |
| | | ಒಟ್ಟು –ಎ ಸೀನಿಯರ್ : | 138 | 8 | 130 | - | 12 | 12 |

| | | | | | | | | |
|---|---|---|---|---|---|---|---|---|
| 2. ಗ್ರೂಪ್ 'ಎ' ಹುದ್ದೆಗಳು : (ಜ್ಯೂನಿಯರ್ ಸ್ಕೇಲ್ ಹುದ್ದೆಗಳು) | | | | | | | | |
| 1 | ಸಹಾಯಕ ಪ್ರಾಧ್ಯಾಪಕರು (ಯು.ಜಿ.ಸಿ. ಸ್ಕೇಲ್) | 57700-182400 | 244 | (ಶೇ.100 ನೇ.ನೇ) | | - | 20 | 20(ವಿವರಗಳು ಅನುಬಂಧ-ಎ) |
| | | | | - | 244 | | | |
| 2 | ಸಹಾಯಕ ಕುಲಸಚಿವರು*** | 52650-97100 | 13 | (ಶೇ.100 ಮುಂಬಡ್ತಿ) | | | | |
| | | | | 13 | – | 2 | - | 2 |
| 3 | ಸಹಾಯಕ ಆಡಳಿತಾಧಿಕಾರಿಗಳು*** | 52650-97100 | 10 | (ಶೇ.100 ಮುಂಬಡ್ತಿ) | | | | |
| | | | | 10 | – | 1 | - | 1 |
| 4 | ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು*** | 52650-97100 | 18 | (ಶೇ.100 ಮುಂಬಡ್ತಿ) | | | | |
| | | | | 18 | – | 2 | - | 2 |
| 5 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಸಿವಿಲ್) | 52650-97100 | 3 | (50:50–ಮು:ನೇ.ನೇ.) | | | | |
| | | | | 2 | 1 | 1 | - | 1 |
| 6 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಎಲೆಕ್ಟ್ರಿಕಲ್) | 52650-97100 | 1 | (50:50–ಮು:ನೇ.ನೇ.) | | | | |
| | | | | 1 | – | - | - | - |
| 7 | ಸ್ಟೋರ್ ಪರ್ಚೇಸ್ ಆಫೀಸರ್ | 52650-97100 | 1 | (ಶೇ.100 ನೇ.ನೇ) | | | | |
| | | | | – | 1 | - | - | - |
| 8 | ಸಹಾಯಕ ವೈದ್ಯಾಧಿಕಾರಿ | 52650-97100 | 7 | (ಶೇ.100 ನೇ.ನೇ) | | | | |
| | | | | – | 7 | - | 1 | 1 |
| 9 | ಸಹಾಯಕ ಮಹಿಳಾ ವೈದ್ಯಾಧಿಕಾರಿ | 52650-97100 | 1 | (ಶೇ.100 ನೇ.ನೇ) | | | | |
| | | | | – | 1 | - | - | - |
| | | ಒಟ್ಟು –ಎ ಜ್ಯೂ: | 298 | 44 | 254 | 6 | 21 | 27 |
| 3. ಗ್ರೂಪ್ 'ಬಿ' ಹುದ್ದೆಗಳು : | | | | | | | | |
| 1 | ಗ್ರಂಥಾಲಯ ಸಹಾಯಕರು | 43100-83900 | 3 | (ಶೇ.100 ನೇ.ನೇ) | | | | |
| | | | | – | 3 | – | 1 | 1 |
| 2 | ಅಧೀಕ್ಷಕ (ಲೆಕ್ಕ) | 43100-83900 | 20 | (ಶೇ.100 ಮುಂಬಡ್ತಿ) | | | | |
| | | | | 20 | – | 2 | – | 2 |
| 3 | ಅಧೀಕ್ಷಕ (ಸಾಮಾನ್ಯ) | 43100-83900 | 18 | (ಶೇ.100 ಮುಂಬಡ್ತಿ) | | | | |
| | | | | 18 | – | 2 | – | 2 |
| 4 | ಆಪ್ತ ಕಾರ್ಯದರ್ಶಿ | 43100-83900 | 7 | (ಶೇ.100 ಮುಂಬಡ್ತಿ) | | | | |
| | | | | 7 | – | 1 | – | 1 |
| 5 | ಸಹಾಯಕ ಅಭಿಯಂತರರು (ಸಿವಿಲ್)/(ಎಲೆಕ್ಟ್ರಿಕಲ್) | 43100-83900 | 6 | (50:50–ಮು:ನೇ.ನೇ.) | | | | |
| | | | | 3** | 3** | 1 | 0 | 1* |
| 6 | ಸಹಾಯಕ ಅಭಿಯಂತರರು (ಆಟೋ) | 43100-83900 | 1 | 1** | – | – | – | – |
| | | ಒಟ್ಟು –ಬಿ : | 55 | 49 | 6 | 6 | 1 | 7 |
| 4. ಗ್ರೂಪ್ 'ಸಿ' ಹುದ್ದೆಗಳು : | | | | | | | | |
| 1 | ಹಿರಿಯ ಸಹಾಯಕ | 37900-70850 | 40 | (ಶೇ.100 ಮುಂಬಡ್ತಿ) | | | | |
| | | | | 40 | – | 4 | 0 | 4 |

| | | | | | | | | | |
|---|---|---|---|---|---|---|---|---|---|
| 2 | ಶೀಘ್ರಲಿಪಿಗಾರರು*** | 37900-70850 | 21 | (ಶೇ.100 ನೇ.ನೇ) | – | 21 | - | 2 | 2 |
| 3 | ಕಿರಿಯ ಅಭಿಯಂತರರು (ಸಿವಿಲ್) | 37900-70850 | 8 | (ಶೇ.100 ನೇ.ನೇ) | – | 8 | - | 1 | 1 |
| 4 | ಕಿರಿಯ ಅಭಿಯಂತರರು (ಎಲೆಕ್ಟ್ರಿಕಲ್) | 37900-70850 | 1 | (ಶೇ.100 ನೇ.ನೇ) | – | 1 | - | - | - |
| 5 | ಕಿರಿಯ ಅಭಿಯಂತರರು (ಆಟೊ) | 37900-70850 | 1 | (ಶೇ.100 ನೇ.ನೇ) | – | 1 | - | - | - |
| 6 | ತಾಂತ್ರಿಕ ಸಹಾಯಕರು | 35400-112400 | 15 | (ಶೇ.100 ನೇ.ನೇ) | – | 15 | - | 2 | 2 |
| 7 | ಕ್ಷೇತ್ರ ವ್ಯವಸ್ಥಾಪಕರು | 35400-112400 | 1 | (ಶೇ.100 ನೇ.ನೇ) | – | 1 | - | - | - |
| 8 | ಕಾರ್ಯಕ್ರಮ ಸಹಾಯಕರು (ಕಂಪ್ಯೂಟರ್) | 35400-112400 | 1 | (ಶೇ.100 ನೇ.ನೇ) | – | 1 | - | - | - |
| 9 | ಕಾರ್ಯಕ್ರಮ ಸಹಾಯಕರು (ಲ್ಯಾಬ್ ಟೆಕ್ನಿಷಿಯನ್) | 35400-112400 | 1 | (ಶೇ.100 ನೇ.ನೇ) | – | 1 | - | - | - |
| 10 | ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್ | 30350-58250 | 148 | (ಶೇ.100 ನೇ.ನೇ) | – | 148 | - | 12 | 12 |
| 11 | ಕ್ಷೇತ್ರ ಸಹಾಯಕ*** | 30350-58250 | 74 | (ಶೇ.1/3–ಮು:2/3 ನೇ.ನೇ) | 19 | 55 | 2 | 4 | 6 |
| 12 | ಪ್ರಯೋಗಶಾಲಾ ಸಹಾಯಕ*** | 30350-58250 | 63 | (ಶೇ.1/3–ಮು:2/3 ನೇ.ನೇ) | 16 | 47 | 2 | 4 | 6* |
| 13 | ಕೇರ್‌ಟೇಕರ್ | 30350-58250 | 10 | (ಶೇ.100 ನೇ.ನೇ) | – | 10 | - | 1 | 1 |
| 14 | ಕಲಾವಿದ ಹಾಗೂ ಫೋಟೋಗ್ರಾಫರ್ | 30350-58250 | 1 | (ಶೇ.100 ನೇ.ನೇ) | – | 1 | - | - | - |
| 15 | ದೂರವಾಣಿ ಆಪರೇಟರ್ | 30350-58250 | 1 | (ಶೇ.100 ನೇ.ನೇ) | – | 1 | - | - | - |
| 16 | ಕಿರಿಯ ಟೆಕ್ನಿಷಿಯನ್ | 30350-58250 | 11 | (ಶೇ.100 ನೇ.ನೇ) | – | 11 | - | 1 | 1 |
| 17 | ಫಾರ್ಮಾಸಿಸ್ಟ್ | 30350-58250 | 3 | (ಶೇ.100 ನೇ.ನೇ) | – | 3 | - | 1 | 1 |
| 18 | ಶೆಲ್ಫ್ ಸಹಾಯಕರು | 30350-58250 | 6 | (ಶೇ.100 ನೇ.ನೇ) | – | 6 | - | 1 | 1 |
| 19 | ಮೆಕಾನಿಕ್ | 30350-58250 | 1 | (ಶೇ.100 ನೇ.ನೇ) | – | 1 | - | - | - |
| 20 | ಕಿರಿಯ ಪ್ರೋಗ್ರಾಮರ್ | 30350-58250 | 1 | (ಶೇ.100 ನೇ.ನೇ) | – | 1 | - | - | - |
| 21 | ವರ್ಕ್ ಇನ್ಸಪೆಕ್ಟರ್ | 30350-58250 | 4 | (ಶೇ.100 ನೇ.ನೇ) | – | 4 | - | 1 | 1 |

| | | | | | | | | |
|---|---|---|---|---|---|---|---|---|
| 22 | ವಾಹನ ಚಾಲಕರು (ಭಾರೀ ವಾಹನ) | 30350-58250 | 13 | (ಶೇ.100 ಮುಂಬಡ್ತಿ) 13 | – | 2 | - | 2 |
| 23 | ಲ್ಯಾಬ್ ಟೆಕ್ನಿಷಿಯನ್ | 30350-58250 | 6 | (ಶೇ.100 ನೇ.ನೇ) – | 6 | - | 1 | 1 |
| 24 | ಫೋರಮನ್ | 30350-58250 | 3 | (ಶೇ.100 ನೇ.ನೇ) – | 3 | – | 1 | 1 |
| 25 | ಟ್ರ್ಯಾಕ್ಟರ್ ಡ್ರೈವರ್ | 27650-52650 | 7 | (ಶೇ.100 ನೇ.ನೇ) – | 7 | - | 1 | 1 |
| 26 | ಡ್ರ್ಯಾಫ್ಟ್ಸ್‌ಮ್ಯಾನ್ | 23500-47650 | 2 | (ಶೇ.100 ನೇ.ನೇ) – | 2 | - | 1 | 1 |
| 27 | ವಾಹನ ಚಾಲಕರು (ಲಘು ವಾಹನ) | 21400-42000 | 41 | (ಶೇ.100 ನೇ.ನೇ) – | 41 | - | 4 | 4 |
| 28 | ಕುಕ್–ಕಮ್–ಕೇರ್‌ಟೇಕರ್ | 21400-42000 | 3 | (ಶೇ.100 ಮುಂಬಡ್ತಿ) 3 | – | 1 | - | 1 |
| 29 | ಸಹಾಯಕ ಬೈಂಡರ್ | 21400-42000 | 1 | (ಶೇ.100 ನೇ.ನೇ) – | 1 | - | - | - |
| 30 | ಅಟೆಂಡರ್ | 21400-42000 | 5 | (ಶೇ.100 ಮುಂಬಡ್ತಿ) 5 | – | 1 | – | 1 |
| 31 | ಪ್ರಯೋಗಾಶಾಲಾ ಅಟೆಂಡರ್ | 21400-42000 | 5 | (ಶೇ.100 ಮುಂಬಡ್ತಿ) 5 | – | 1 | – | 1 |
| 32 | ಪ್ಲಂಬರ್ | 21400-42000 | 4 | (ಶೇ.100 ನೇ.ನೇ) – | 4 | - | 1 | 1 |
| 33 | ಅಸಿಸ್ಟೆಂಟ್ ಕುಕ್ ಕಮ್ ಕೇರ್ ಟೇಕರ್ | 18600-32600 | 12 | (ಶೇ.100 ನೇ.ನೇ) – | 12 | - | 1 | 1 |
| 34 | ಏಪಿಯರಿಮ್ಯಾನ್ | 18600-32600 | 1 | (ಶೇ.100 ನೇ.ನೇ) – | 1 | - | - | - |
| 35 | ಪಂಪ್ ಅಟೆಂಡರ್ | 18600-32600 | 6 | (ಶೇ.100 ನೇ.ನೇ) – | 6 | - | 1 | 1 |
| 36 | ವಾರ್ಡ್ ಬಾಯ್/ ವಾರ್ಡ್ ಗರ್ಲ್ | 18600-32600 | 3 | (ಶೇ.100 ನೇ.ನೇ) – | 3 | - | 1 | 1 |
| | | ಒಟ್ಟು – ಸಿ : | 524 | 101 | 423 | 13 | 42 | 55 |
| | | | | **5. ಗ್ರೂಪ್ 'ಡಿ' ಹುದ್ದೆಗಳು :** | | | | |
| 1 | ಮಾರ್ಕರ್ | 17000-28950 | 1 | (ಶೇ.100 ನೇ.ನೇ) – | 1 | - | - | - |
| 2 | ಸುದ್ಧಿವಾಹಕರು | 17000-28950 | 78 | (ಶೇ.100 ನೇ.ನೇ) – | 78 | - | 7 | 7 |
| 3 | ಬುಲಕ್‌ಮೆನ್ | 17000-28950 | 1 | (ಶೇ.100 ನೇ.ನೇ) – | 1 | - | - | - |
| 4 | ಹೆಲ್ಪರ್ಸ್(ಬಸ್, ಸ್ಟೋರ್, ವೈರ್‌ಮೆನ್, ಕಾರ್‌ಪೆಂಟಿಂಗ್, ಸ್ಪೋರ್ಟ್ಸ್, ಮಾರ್ಕಿಂಗ್ ಮುಂತಾದವು | 17000-28950 | 17 | (ಶೇ.100 ನೇ.ನೇ) – | 17 | - | 2 | 2 |
| 6 | ಮಾಲಿ/ಗಾರ್ಡನರ್ | 17000-28950 | 38 | (ಶೇ.100 ನೇ.ನೇ) – | 38 | - | 4 | 4 |

| | | | | | | | | |
|---|---|---|---|---|---|---|---|---|
| 7 | ಗ್ರ್ಯಾಫ್ಟರ್ | 17000-28950 | 1 | (ಶೇ.100 ನೇ.ನೇ.) | | | | |
| | | | | – | 1 | - | - | - |
| 8 | ಕಾವಲುಗಾರ | 17000-28950 | 48 | (ಶೇ.100 ನೇ.ನೇ.) | | | | |
| | | | | – | 48 | - | 4 | 4 |
| 9 | ಜನಿಟರ್ | 17000-28950 | 10 | (ಶೇ.100 ನೇ.ನೇ.) | | | | |
| | | | | – | 10 | - | 1 | 1 |
| 10 | ಕ್ಷೇತ್ರ ಕಾರ್ಮಿಕ | 17000-28950 | 46 | (ಶೇ.100 ನೇ.ನೇ.) | | | | |
| | | | | – | 46 | - | 4 | 4 |
| 11 | ಆರೋಹಿ | 17000-28950 | 1 | (ಶೇ.100 ನೇ.ನೇ.) | | | | |
| | | | | - | 1 | - | 1 | 1 |
| | | ಒಟ್ಟು – ಡಿ: | 241 | 0 | 241 | 0 | 23 | 23 |

**NOTES:**

* Vacancy based operated on rotation basis

** Where single post requires to be shared, may be allotted to two sections of posts on rotation basis while filling by promotion / Recruitment.

***Subject to change of method of recruitment in the proposed Cadre & Recruitment rules of UHS, Bagalkote and to be adopted and notified separately after receipt of approval from Government / Hon'ble Governor of Karnataka & Chancellor, UHS, Bagalkote

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ಘೋಷ್ವಾರ-I (State level Local Cadre)

| ಕ್ರ. ಸಂ | ಹುದ್ದೆ | ಮಂಜೂರಾದ ವೃಂದಬಲ (ತೋವಿವಿ ಬಾಗಲಕೋಟೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ೨) ಮಾತ್ರ ವೃಂದ | ಮುಂಬಡ್ತಿ | ನೇರ ನೇಮಕಾತಿ (ನೇ.ನೇ.) | ಸ್ಥಳೀಯ ವೃಂದದಲ್ಲಿ ಹೈ-ಕ ಪ್ರದೇಶದವರಿಗಾಗಿ ಗುರುತಿಸಲಾದ ಶೇ.8ರಷ್ಟು ಹುದ್ದೆಗಳು ಸ್ಥಳೀಯ ವೃಂದ | | |
|---|---|---|---|---|---|---|---|
| | | | | | ಮುಂಬಡ್ತಿ | ನೇರ ನೇಮಕಾತಿ | ಒಟ್ಟು |
| 1 | ಗ್ರೂಪ್ 'ಎ' ಸೀನಿಯರ್ ಹುದ್ದೆಗಳು | 138 | 8 | 130 | - | 12 | 12 |
| 2 | ಗ್ರೂಪ್ 'ಎ' ಜೂನಿಯರ್ ಹುದ್ದೆಗಳು | 298 | 44 | 254 | 6 | 21 | 27 |
| 3 | ಗ್ರೂಪ್ 'ಬಿ' ಹುದ್ದೆಗಳು | 55 | 49 | 6 | 6 | 1 | 7 |
| 4 | ಗ್ರೂಪ್ 'ಸಿ' ಹುದ್ದೆಗಳು | 524 | 101 | 423 | 13 | 42 | 55 |
| 5 | ಗ್ರೂಪ್ 'ಡಿ' ಹುದ್ದೆಗಳು | 241 | 0 | 241 | 0 | 23 | 23 |
| | ಒಟ್ಟು | 1256 | 202 | 1054 | 25 | 99 | 124 |

ಆದೇಶದ ಮೇರೆಗೆ,

ಕುಲಸಚಿವರು,
ತೋ.ವಿ.ವಿ., ಬಾಗಲಕೋಟೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

**<u>ಪರಿಷ್ಕೃತ ಅನುಸೂಚಿ –II (Regional level Local Cadre)</u>**

ಬಾಗಲಕೋಟೆಯ ತೋ.ವಿ.ವಿ. ಅಡಿ ಬರುವ ತೋಟಗಾರಿಕೆ ಮಹಾವಿದ್ಯಾಲಯ/ವಿಸ್ತರಣಾ ಕೇಂದ್ರ ಬೀದರ್ ಮತ್ತು ಕೊಪ್ಪಳಗಳಲ್ಲಿ ಹುದ್ದೆಗಳನ್ನು ಗುರುತಿಸುವ ಕುರಿತು

| ಕ್ರ. ಸಂ | ಹುದ್ದೆ | ವೇತನ ಶ್ರೇಣಿ (ರೂ.ಗಳಲ್ಲಿ) | ಮಂಜೂರಾದ ವೃಂದಬಲ (ತೋವಿವಿ ಬಾಗಲಕೋಟೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ) ಮಾತ್ರ ವೃಂದ | ಮುಂಬಡ್ತಿ | ನೇರ ನೇಮಕಾತಿ (ನೇ.ನೇ.) | ಸ್ಥಳೀಯ ವೃಂದದಲ್ಲಿ ಹೈ-ಕ ಪ್ರದೇಶದವರಿಗಾಗಿ ಗುರುತಿಸಲಾದ ಶೇ.75, 80 ಹಾಗೂ 85ರಷ್ಟು ಹುದ್ದೆಗಳು ಸ್ಥಳೀಯ ವೃಂದ: ಮುಂಬಡ್ತಿ | ನೇರ ನೇಮಕಾತಿ | ಒಟ್ಟು |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| **1. ಗ್ರೂಪ್ 'ಎ' ಹುದ್ದೆಗಳು : (ಸೀನಿಯರ್ ಸ್ಕೇಲ್ ಹುದ್ದೆಗಳು) – 75%** | | | | | | | | |
| 1 | ಅಧಿಕಾರಿಗಳು (ನಿಶ್ಚಿತಾವಧಿ ಹುದ್ದೆ) | 144200-218200 | | (ಶೇ.100 ನೇ.ನೇ.) | | | 1 | 1* |
| | ಡೀನ್, ತೋ.ಮ., ಬೀದರ್ | | 1 | – | 1 | | | |
| | ಡೀನ್, ತೋ.ಮ., ಕೊಪ್ಪಳ | | 1 | – | 1 | | | |
| 1 | ಪ್ರಾಧ್ಯಾಪಕರು (ಇಂಟರ್‌ಸೇ ಮೆರಿಟ್) | 144200-218200 | 4 | (ಶೇ.100 ನೇ.ನೇ.) | | – | 3 | 3 |
| | | | | – | 4 | | | |
| 2 | ಸಹ ಪ್ರಾಧ್ಯಾಪಕರು (ಇಂಟರ್‌ಸೇ ಮೆರಿಟ್) | 79800-211500 | 11 | (ಶೇ.100 ನೇ.ನೇ.) | | – | 9 | 9 |
| | | | | – | 11 | | | |
| | | ಒಟ್ಟು –ಎ ಸೀ: | 17 | – | 17 | - | 13 | 13 |
| **2. ಗ್ರೂಪ್ 'ಎ' ಹುದ್ದೆಗಳು : (ಜ್ಯೂನಿಯರ್ ಸ್ಕೇಲ್ ಹುದ್ದೆಗಳು) – 75%** | | | | | | | | |
| 1 | ಸಹಾಯಕ ಪ್ರಾಧ್ಯಾಪಕರು (ಯು.ಜಿ.ಸಿ. ಸ್ಕೇಲ್) | 57700-182400 | 50 | (ಶೇ.100 ನೇ.ನೇ) | | - | 38 | 38 (ವಿವರಗಳು ಅನುಬಂಧ–ಬಿ) |
| | | | | - | 50 | | | |
| 2 | ಸಹಾಯಕ ಕುಲಸಚಿವರು*** | 52650-97100 | 2 | (ಶೇ.100 ಮುಂಬಡ್ತಿ) | | 1 | - | 1 |
| | | | | 2 | – | | | |
| 3 | ಸಹಾಯಕ ಆಡಳಿತಾಧಿಕಾರಿಗಳು*** | 52650-97100 | 2 | (ಶೇ.100 ಮುಂಬಡ್ತಿ) | | 1 | - | 1 |
| | | | | 2 | – | | | |
| 4 | ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು*** | 52650-97100 | 2 | (ಶೇ.100 ಮುಂಬಡ್ತಿ) | | 1 | - | 1 |
| | | | | 2 | – | | | |
| 5 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಸಿವಿಲ್) | 52650-97100 | 1 | (50:50–ಮು:ನೇ.ನೇ.) | | - | - | - |
| | | | | 1 | – | | | |
| 8 | ಸಹಾಯಕ ವೈದ್ಯಾಧಿಕಾರಿ | 52650-97100 | 2 | (ಶೇ.100 ನೇ.ನೇ) | | - | 1 | 1 |
| | | | | – | 2 | | | |
| | | ಒಟ್ಟು –ಎ ಜ್ಯೂ: | 59 | 7 | 52 | 3 | 39 | 42 |
| **3. ಗ್ರೂಪ್ 'ಬಿ' ಹುದ್ದೆಗಳು : 75%** | | | | | | | | |
| 1 | ಗ್ರಂಥಾಲಯ ಸಹಾಯಕರು | 43100-83900 | 1 | (ಶೇ.100 ನೇ.ನೇ) | | – | – | – |
| | | | | – | 1 | | | |
| 2 | ಅಧೀಕ್ಷಕ (ಲೆಕ್ಕ) | 43100-83900 | 2 | (ಶೇ.100 ಮುಂಬಡ್ತಿ) | | 1 | – | 1 |
| | | | | 2 | – | | | |
| 3 | ಅಧೀಕ್ಷಕ (ಸಾಮಾನ್ಯ) | 43100-83900 | 2 | (ಶೇ.100 ಮುಂಬಡ್ತಿ) | | 1 | – | 1 |
| | | | | 2 | – | | | |
| | | ಒಟ್ಟು –ಬಿ : | 5 | 4 | 1 | 2 | - | 2 |

| | | | | | | | | |
|---|---|---|---|---|---|---|---|---|
| **4. ಗ್ರೂಪ್ 'ಸಿ' ಹುದ್ದೆಗಳು : 80%** | | | | | | | | |
| 1 | ಹಿರಿಯ ಸಹಾಯಕ | 37900-70850 | 4 | (ಶೇ.100 ಮುಂಬಡ್ತಿ) | | | | |
| | | | | 4 | – | 3 | 0 | 3 |
| 2 | ಶೀಘ್ರಲಿಪಿಗಾರರು*** | 37900-70850 | 2 | (ಶೇ.100 ನೇ.ನೇ) | | | | |
| | | | | – | 2 | – | 1 | 1 |
| 3 | ತಾಂತ್ರಿಕ ಸಹಾಯಕರು | 35400-112400 | 0 | (ಶೇ.100 ನೇ.ನೇ) | | | | |
| | | | | – | 0 | – | – | – |
| 4 | ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್ | 30350-58250 | 18 | (ಶೇ.100 ನೇ.ನೇ) | | | | |
| | | | | – | 18 | – | 15 | 15 |
| 5 | ಕ್ಷೇತ್ರ ಸಹಾಯಕ*** | 30350-58250 | 7 | (ಶೇ.1/3–ಮು: 2/3 ನೇ.ನೇ) | | | | |
| | | | | 2 | 5 | 2 | 4 | 6 |
| 6 | ಪ್ರಯೋಗಶಾಲಾ ಸಹಾಯಕ*** | 30350-58250 | 9 | (ಶೇ.1/3–ಮು: 2/3 ನೇ.ನೇ) | | | | |
| | | | | 3 | 6 | 2 | 6 | 8 |
| 7 | ಕೇರ್‌ಟೇಕರ್ | 30350-58250 | 3 | (ಶೇ.100 ನೇ.ನೇ) | | | | |
| | | | | – | 3 | – | 2 | 2 |
| 8 | ದೂರವಾಣಿ ಆಪರೇಟರ್ | 30350-58250 | 1 | (ಶೇ.100 ನೇ.ನೇ) | | | | |
| | | | | – | 1 | – | – | – |
| 9 | ಕಿರಿಯ ಟೆಕ್ನಿಷಿಯನ್ | 30350-58250 | 2 | (ಶೇ.100 ನೇ.ನೇ) | | | | |
| | | | | – | 2 | – | 1 | 1 |
| 10 | ಶೆಲ್ಫ್ ಸಹಾಯಕರು | 30350-58250 | 1 | (ಶೇ.100 ನೇ.ನೇ) | | | | |
| | | | | – | 1 | – | – | – |
| 11 | ವಾಹನ ಚಾಲಕರು (ಭಾರೀ ವಾಹನ) | 30350-58250 | 1 | (ಶೇ.100 ಮುಂಬಡ್ತಿ) | | | | |
| | | | | 1 | – | – | – | – |
| 12 | ವಾಹನ ಚಾಲಕರು (ಲಘು ವಾಹನ) | 21400-42000 | 3 | (ಶೇ.100 ನೇ.ನೇ) | | | | |
| | | | | – | 3 | – | 2 | 2 |
| 13 | ಪ್ರಯೋಗಾಶಾಲಾ ಅಟೆಂಡರ್ | 21400-42000 | 1 | (ಶೇ.100 ಮುಂಬಡ್ತಿ) | | | | |
| | | | | 1 | – | – | – | – |
| 14 | ಪ್ಲಂಬರ್ | 21400-42000 | 2 | (ಶೇ.100 ನೇ.ನೇ) | | | | |
| | | | | – | 2 | – | 1 | 1 |
| 15 | ಅಸಿಸ್ಟೆಂಟ್ ಕುಕ್ ಕಮ್ ಕೇರ್ ಟೇಕರ್ | 18600-32600 | 4 | (ಶೇ.100 ನೇ.ನೇ) | | | | |
| | | | | – | 4 | – | 3 | 3 |
| 16 | ಪಂಪ್ ಅಟೆಂಡರ್ | 18600-32600 | 1 | (ಶೇ.100 ನೇ.ನೇ) | | | | |
| | | | | – | 1 | – | – | – |
| | | ಒಟ್ಟು – ಸಿ : | 59 | 11 | 48 | 7 | 35 | 42 |
| **5. ಗ್ರೂಪ್ 'ಡಿ' ಹುದ್ದೆಗಳು : 85%** | | | | | | | | |
| 1 | ಸುದ್ದಿವಾಹಕರು | 17000-28950 | 6 | (ಶೇ.100 ನೇ.ನೇ) | | | | |
| | | | | – | 6 | – | 5 | 5 |

| | | | | | | | | |
|---|---|---|---|---|---|---|---|---|
| 2 | ಹೆಲ್ಪರ್ಸ್(ಬಸ್, ಸ್ಟೋರ್, ವೈರ್‌ಮೆನ್, ಕಾರ್‌ಪೆಂಟಿಂಗ್, ಸ್ಪೋರ್ಟ್ಸ್, ಮಾರ್ಕಿಂಗ್ ಮುಂತಾದವು | 17000-28950 | 2 | (ಶೇ.100 ನೇ.ನೇ) | | | | |
| | | | | – | 2 | – | 1 | 1 |
| 3 | ಮಾಲಿ/ಗಾರ್ಡನರ್ | 17000-28950 | 4 | (ಶೇ.100 ನೇ.ನೇ) | | | | |
| | | | | – | 4 | – | 3 | 3 |
| 4 | ಕಾವಲುಗಾರ | 17000-28950 | 5 | (ಶೇ.100 ನೇ.ನೇ) | | | | |
| | | | | – | 5 | – | 4 | 4 |
| 5 | ಕ್ಷೇತ್ರ ಕಾರ್ಮಿಕ | 17000-28950 | 6 | (ಶೇ.100 ನೇ.ನೇ) | | | | |
| | | | | – | 6 | – | 5 | 5 |
| | | ಒಟ್ಟು – ಡಿ: | 23 | 0 | 23 | 0 | 18 | 18 |

**NOTES:**

* Vacancy based operated on rotation basis

** Where single post requires to be shared, may be allotted to two sections of posts on rotation basis while filling by promotion / Recruitment.

***Subject to change of method of recruitment in the proposed Cadre & Recruitment rules of UHS, Bagalkote and to be adopted and notified separately after receipt of approval from Government / Hon'ble Governor of Karnataka & Chancellor, UHS, Bagalkote

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ಘೋಷ್ವಾರ–II (Regional level Local Cadre)

| ಕ್ರ. ಸಂ | ಹುದ್ದೆ | ಮಂಜೂರಾದ ವೃಂದಬಲ (ತೋವಿವಿ ಬಾಗಲಕೋಟೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ) ಮಾತ್ರ ವೃಂದ | ಮುಂಬಡ್ತಿ | ನೇರ ನೇಮಕಾತಿ (ನೇ.ನೇ.) | ಸ್ಥಳೀಯ ವೃಂದದಲ್ಲಿ ಹೈ-ಕ ಪ್ರದೇಶದವರಿಗಾಗಿ ಗುರುತಿಸಲಾದ ಶೇ.75, 80 ಹಾಗೂ 85 ರಷ್ಟು ಹುದ್ದೆಗಳು ಸ್ಥಳೀಯ ವೃಂದ | | |
|---|---|---|---|---|---|---|---|
| | | | | | ಮುಂಬಡ್ತಿ | ನೇರ ನೇಮಕಾತಿ | ಒಟ್ಟು |
| 1 | ಗ್ರೂಪ್ 'ಎ' ಸೀನಿಯರ್ ಹುದ್ದೆಗಳು (75%) | 17 | - | 17 | - | 13 | 13 |
| 2 | ಗ್ರೂಪ್ 'ಎ' ಜೂನಿಯರ್ ಹುದ್ದೆಗಳು (75%) | 59 | 7 | 52 | 3 | 39 | 42 |
| 3 | ಗ್ರೂಪ್ 'ಬಿ' ಹುದ್ದೆಗಳು (75%) | 5 | 4 | 1 | 2 | - | 2 |
| 4 | ಗ್ರೂಪ್ 'ಸಿ' ಹುದ್ದೆಗಳು (80%) | 59 | 11 | 48 | 7 | 35 | 42 |
| 5 | ಗ್ರೂಪ್ 'ಡಿ' ಹುದ್ದೆಗಳು (85%) | 23 | 0 | 23 | 0 | 18 | 18 |
| | ಒಟ್ಟು | 163 | 22 | 141 | 12 | 105 | 117 |

ಆದೇಶದ ಮೇರೆಗೆ,

ಕುಲಸಚಿವರು,
ತೋ.ವಿ.ವಿ., ಬಾಗಲಕೋಟೆ

ಪ್ರತಿಯನ್ನು ಆದರಪೂರ್ವಕವಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು.ಇ. (ಆಡಳಿತ)/ಹೈದ್ರಬಾದ್–ಕರ್ನಾಟಕ ವಿಶೇಷ ಕೋಶ, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು.
3) ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳು, ತೋ.ವಿ.ವಿ., ಬಾಗಲಕೋಟೆ.
4) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ., ಬಾಗಲಕೋಟೆ.
5) ಕ/ಕ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 22 ಹೈಕಕೋ 2013

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 24.04.2019

**ಸುತ್ತೋಲೆ**

ವಿಷಯ: ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಗೆ ಸೇರ್ಪಡೆಗೊಳಿಸಿರುವ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಕಂಇ 139 ಭೂದಾಪು 2013, ದಿನಾಂಕ 21.03.2018.
2. ಅಧಿಸೂಚನೆ ಸಂಖ್ಯೆ: ಕಂಇ 139 ಭೂದಾಪು 2013, ದಿನಾಂಕ 24.12.2018.

*****

ಉಲ್ಲೇಖಿತ ಆದೇಶಗಳನ್ವಯ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕನ್ನು ದಾವಣಗೆರೆ ಜಿಲ್ಲೆಯಿಂದ ತೆಗೆದು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೆ ಸೇರ್ಪಡೆಗೊಳಿಸಲಾಗಿದ್ದು, ಭಾರತ ಸಂವಿಧಾನದ ಅನುಚ್ಛೇದ 371ಜೆ ರಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೀಡಲಾಗಿರುವ ವಿಶೇಷ ಸ್ಥಾನಮಾನವು ಹರಪನಹಳ್ಳಿ ತಾಲ್ಲೂಕಿಗೂ ಅನ್ವಯವಾಗಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಕ್ರಮ ವಹಿಸಲು ಎಲ್ಲಾ ಇಲಾಖೆಗಳಿಗೆ ತಿಳಿಸಲಾಗಿದೆ.

1. ಭಾರತದ ಸಂವಿಧಾನದ ಅನುಚ್ಛೇದ 371ಜೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ)(ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, 2013 ಮತ್ತು ಅದರಡಿ ಹೊರಡಿಸಲಾದ ಸುತ್ತೋಲೆಗಳನ್ವಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 6 ರಂತೆ ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಹೊಂದಿರುವ ಸ್ಥಳೀಯ ವ್ಯಕ್ತಿಗಳಿಗೆ ಅರ್ಹತಾ ಪ್ರಮಾಣಪತ್ರಗಳನ್ನು ನೀಡಲು ಸಕ್ಷಮ ಪ್ರಾಧಿಕಾರಗಳು ಅಗತ್ಯ ಕ್ರಮವಹಿಸುವುದು.

2. ಎಲ್ಲಾ ಇಲಾಖೆಗಳು ತಮ್ಮ ಆಡಳಿತ ವ್ಯಾಪ್ತಿಗೆ ಸಂಬಂಧಿಸಿದಂತೆ ಹರಪನಹಳ್ಳಿ ಕಂದಾಯ ತಾಲ್ಲೂಕಿನಲ್ಲಿನ ಹುದ್ದೆಗಳನ್ನೂ ಸಹ ಪರಿಗಣಿಸಿ ಸ್ಥಳೀಯ ವೃಂದವನ್ನು ರಚಿಸಿ ಅಧಿಸೂಚಿಸಬೇಕಾಗಿರುತ್ತದೆ. ಈಗಾಗಲೇ ಹುದ್ದೆಗಳನ್ನು ಗುರುತಿಸಿ ಹೊರಡಿಸಲಾದ ಅಧಿಸೂಚನೆಗೆ ಹರಪನಹಳ್ಳಿ ತಾಲ್ಲೂಕು ಸೇರ್ಪಡೆಯಿಂದ ಲಭ್ಯವಾಗಬಹುದಾದ ಹುದ್ದೆಗಳನ್ನು ಸೇರಿಸಿ ತಿದ್ದುಪಡಿ ಮೂಲಕ ಅಧಿಸೂಚಿಸಿ. ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 6(1)(ಇ) ಪ್ರಕಾರ ಮತ್ತು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ

ನೇಮಕಾತಿಯಲ್ಲಿ ಮೀಸಲಾತಿ)(ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013ರ ನಿಯಮ 5ರ ಪ್ರಕಾರ ಸ್ಥಳೀಯ ವೃಂದ ಆಯ್ಕೆಗೆ ಹರಪನಹಳ್ಳಿಯ ಅರ್ಹ ಸ್ಥಳೀಯ ವ್ಯಕ್ತಿಗಳಿಗೆ ಮಾತ್ರ ಅಭಿಮತ ಚಲಾಯಿಸಲು ಅವಕಾಶ ನೀಡಿ, ಆಯ್ಕೆಗನುಸಾರ, ತತ್ಸಂಬಂಧ ವೃಂದಗಳಿಗೆ ಹಂಚಿಕೆ ಮಾಡಿ ಕಾಲಕಾಲಕ್ಕೆ ಈ ಸಂಬಂಧ ಹೊರಡಿಸಲಾಗಿರುವ ಸುತ್ತೋಲೆಗಳ ಪ್ರಕಾರ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವುದು.

3. ಈ ರೀತಿ ಸ್ಥಳೀಯ ವೃಂದಕ್ಕೆ ಹಂಚಿಕೆಯಾದ ನೌಕರರ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮ 6ರ ಪ್ರಕಾರ ನಿಗಧಿಪಡಿಸುವುದು ಮತ್ತು ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 33 ಹೈಕಉ 2014, ದಿನಾಂಕ 10.04.2014ರನ್ವಯ ರೋಸ್ಟರ್ ಬಿಂದುಗಳನ್ನು ಸರಿದೂಗಿಸಿ, ರೋಸ್ಟರನ್ನು ಚಾಲನೆಗೊಳಿಸುವಂತೆ ತಿಳಿಸಿದೆ.

4. ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ, 2013 ಹಾಗೂ ಕರ್ನಾಟಕ ಖಾಸಗಿ ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳ (ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಪ್ರವೇಶ ನಿಯಂತ್ರಣ) ಆದೇಶ, 2013 ರನ್ವಯ ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿನ ಅಧ್ಯಯನದ ಪ್ರತಿಯೊಂದು ಕೋರ್ಸಿನಲ್ಲಿ ಲಭ್ಯವಿರುವ ಸೀಟುಗಳಿಗೆ ಸಂಬಂಧಿಸಿದಂತೆ ಸ್ಥಳೀಯ ವ್ಯಕ್ತಿಗಳಿಗೆ ನಿಗಧಿತ ಮೀಸಲಾತಿಯನ್ನು ಕಲ್ಪಿಸತಕ್ಕದ್ದು.

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲಾ ಇಲಾಖಾ ಮುಖ್ಯಸ್ಥರು.
3. ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ.
4. ಜಿಲ್ಲಾಧಿಕಾರಿಗಳು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ಬೀದರ್ ಜಿಲ್ಲೆ.
5. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ಬೀದರ್ ಜಿಲ್ಲೆ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರು/ಉಪ ನಿರ್ದೇಶಕರು, ಕಲಬುರಗಿ/ರಾಯಚೂರು/ಕೊಪ್ಪಳ/ಯಾದಗಿರಿ/ಬಳ್ಳಾರಿ/ ಬೀದರ್ ಜಿಲ್ಲೆ.
7. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಎಲ್ಲಾ ಸಹಾಯಕ ಆಯುಕ್ತರು.
8. ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳು.
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ,
10. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು
11. ವಿಶೇಷಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
12. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ – ಮಾಹಿತಿಗಾಗಿ
13. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

-318

# ಅನುಬಂಧ – ಎ

## ಸ್ವಗ್ರಾಮ ಪ್ರಮಾಣಪತ್ರ

[ಅನುಚ್ಛೇದ 371 (ಜೆ) ಮೇರೆಗೆ]

(5 (2)ನೇ ನಿಯಮ ನೋಡಿ)

[ಪ್ರಮಾಣಪತ್ರಗಳ ನೀಡಿಕೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ ಶ್ರೀಮತಿ ------------------ ರವರು ------------------ ರವರ ಮಗ/ ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ------------------ ಜಿಲ್ಲೆಯ -- ------------ ತಾಲ್ಲೂಕಿನ, ------------------ ಗ್ರಾಮ/ ಪಟ್ಟಣವನ್ನು ತನ್ನ ಸೇವಾ ಪುಸ್ತಕದಲ್ಲಿ ತನ್ನ ಸ್ವಗ್ರಾಮ/ ಸ್ಥಳ ಎಂದು ಘೋಷಿಸಿರುತ್ತಾರೆ.

ಸೇವಾ ಪುಸ್ತಕದಲ್ಲಿರುವ ನಮೂದನ್ನು ನಾನು ಖುದ್ದಾಗಿ ಪರಿಶೀಲಿಸಿದ್ದೇನೆ ಮತ್ತು ಮೇಲಿನ ನಮೂದು 01-01-2013ಕ್ಕೆ ಮುಂಚೆ ಸೇವಾ ಪುಸ್ತಕದಲ್ಲಿ ಇತ್ತೆಂದು ಸ್ವತಃ ಮನವರಿಕೆ ಮಾಡಿಕೊಂಡಿರುತ್ತೇನೆ.

ಸ್ಥಳ: ----------------------------

ದಿನಾಂಕ: ------------------

ಹೆಸರು ------------------

ಪದನಾಮ --------------

ಕಛೇರಿ ----------------

ಇಲಾಖೆ --------------

## ಅನುಬಂಧ – ಬಿ

### ಅರ್ಹತಾ ಪ್ರಮಾಣಪತ್ರ

[ಅನುಚ್ಛೇದ 371 (ಜೆ) ಮೇರೆಗೆ]
(5 (3)ನೇ ನಿಯಮ ನೋಡಿ)

[ಪ್ರಮಾಣಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

ಶ್ರೀ/ ಶ್ರೀಮತಿ ------------------ ರವರು ------------------ ರವರ ಮಗ/ ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ------------------ ಜಿಲ್ಲೆಯ ------------- ತಾಲ್ಲೂಕಿನ ------------------ ಗ್ರಾಮ/ ಪಟ್ಟಣದ ಒಬ್ಬ ಸ್ಥಳೀಯ ವ್ಯಕ್ತಿಯಾಗಿರುತ್ತಾರೆ.

ಸ್ಥಳ: ---------------------------
ದಿನಾಂಕ: ------------------

ಹೆಸರು ------------------
ಅಸಿಸ್ಟೆಂಟ್ ಕಮೀಷನರ್
------------ ಉಪ ವಿಭಾಗ
------------ ಜಿಲ್ಲೆ

/34

ಅನುಬಂಧ–ಸಿ

## ಸ್ಥಳೀಯ ವೃಂದದ ಸೇರಿಕೆಗಾಗಿ ಅರ್ಜಿ

(371 (ಜೆ) ಅನುಚ್ಛೇದದ ಮೇರೆಗೆ)
(6ನೇ ನಿಯಮ ನೋಡಿ)

[ಸ್ಥಳೀಯ ರಚನೆ, ವೃಂದಗಳು, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆಗಾಗಿ ಕರ್ನಾಟಕ ಸಾರ್ವಜನಿಕ ಉದ್ಯೋಗದಲ್ಲಿ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013]

1. ಸ್ಥಳೀಯ ವೃಂದದ ಹೆಸರು : ____________
2. ಇಲಾಖೆ : ____________
3. ಜಿಲ್ಲೆ (ಸಂಬಂಧಿಸಿದ್ದರೆ) : ____________
4. ಅರ್ಜಿದಾರನ ಹೆಸರು : ____________
5. ಪ್ರಸ್ತುತ ಹುದ್ದೆಯಲ್ಲಿರುವ ಸ್ಥಳ : ____________
6. ಹುದ್ದೆಯ ಹೆಸರು (ಪದನಾಮ) : ____________

ನಾನು ಈ ಮೇಲೆ ಹೇಳಿದ ವೃಂದವನ್ನು ಸೇರಲು ಇಚ್ಛಿಸುವುದಾಗಿ ಮನವಿ ಮಾಡುತ್ತೇನೆ. ನಾನು ಸ್ಥಳೀಯ ವ್ಯಕ್ತಿಯಾಗಿದ್ದು ನನ್ನ ಕ್ಲೇಮಿನ ರುಜುವಾತಾಗಿ ನನ್ನ ಸ್ವಗ್ರಾಮ/ಅರ್ಹತಾ ಪ್ರಮಾಣ ಪತ್ರವನ್ನು ಈ ಮೂಲಕ ಲಗತ್ತಿಸಿದ್ದೇನೆ.

ಸ್ಥಳ: ____________
ದಿನಾಂಕ: ____________

ಹೆಸರು: ____________
ವಿಳಾಸ: ____________
____________
____________

ಮೊಬೈಲ್ ಸಂಖ್ಯೆ: ____________